**ಓ.ಎಸ್. ನಂಬರಃ 20/2020**

**ಡಿ. ಡಬ್ಲ್ಯೂಃ 2**

**(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 01-03-2025)**

**ಪಾಟೀ ಸವಾಲು : ವಾದಿ ಪರ ಶ್ರೀ ಆರ್ ಆರ್ ಎಸ್ ವಕೀಲರಿಂದ,**

ನಾನು ವಾಸ ಮಾಡುತ್ತಿರುವ ಮನೆಯ ನಂಬರ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಕಾಣಿಸಿದ ವಿಳಾಸದಲ್ಲಿ ನಾನು ಜನಿಸಿದಾಗಿನಿಂದ ವಾಸ ಮಾಡುತ್ತಿದ್ದೇನೆ. ನಾನು ವಾಸ ಮಾಡುತ್ತಿರುವ ಮನೆ ಇರುವ ಜಾಗದ ಸರ್ವೇ ನಂಬರ 227 ಆಗಿರುತ್ತದೆ. ಸ್ದ್ರಿ ಸರ್ವೇ ನಂಬರನಲ್ಲಿ ನನಗೆ 17 ಗುಂಟೆ ಜಮೀನು ಇರುತ್ತದೆ. ಅದೇ ರೀತಿ ಚಿಟ್ಟಿಹಕ್ಕಲನಲ್ಲಿ ನನಗೆ ಸೇರಿದ ಬೇರೆ ಜಮೀನು ಕೂಡ ಇರುತ್ತದೆ. ಸ್ದ್ರಿ ಜಮೀನುಗಳ ಸರ್ವೇ ನಂಬರ ನನಗೆ ಈಗ ಹೇಳಲಾಗುವುದಿಲ್ಲ. 2. ನನಗೆ 1 ನೇ ವಾದಿಯ ಗಂಡ ಮತ್ತು 2 ರಿಂದ 5 ನೇ ವಾದಿಗಳ ತಂದೆ ಜಟ್ಟಯ್ಯ ದೇವಾಡಿಗರವರ ಪರಿಚಯ ಇರುತ್ತದೆ. ಸ್ದ್ರಿ ಜಟ್ಟಯ್ಯ ದೇವಾಡಿಗರವರು ಮತ್ತು ನನ್ನ ಕುಟುಂಬದವರು ಒಟ್ಟಾಗಿ ನಮ್ಮ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದೆವು ಎಂದರೆ ಸರಿ. ಸ್ದ್ರಿ ಜಟ್ಟಯ್ಯ ದೇವಾಡಿಗರವರ ಮರಣದ ನಂತರ ನನಗೆ ಮತ್ತು ವಾದಿಗಳಿಗೆ ವೈಮನಸ್ಸು ಉಂಟಾಯಿತು ಎಂದರೆ ಸರಿ.

2. ಪ್ರಸ್ತುತ ನಾನು ಕೂಲಿ ಕೆಲಸ ಮಾಡುತ್ತಿದ್ದೇನೆ. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. 1 ನೇ ಪ್ರತಿವಾದಿಯವರು ನನಗೆ ಸಾಕ್ಷಿ ಹೇಳಲು ಕರೆದಿರುತ್ತಾರೆ. ಜಾಗದ ವಿಚಾರಕ್ಕೆ ಸಂಬಂಧಿಸಿದಂತೆ ಸಾಕ್ಷಿ ಹೇಳಲು ನನಗೆ ಕೇಳಿಕೊಂಡಿರುತ್ತಾರೆ. ಈ ದಾವೆಯನ್ನು ವಾದಿಯವರು ಜಾಗ ತಮ್ಮದು ಎಂದು ಹೇಳಿ ದಾವೆ ದಾಖಲಿಸಿರುತ್ತಾರೆ. ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ತಮ್ಮ ಜಾಗವನ್ನು ಅತಿಕ್ರಮಿಸಿ ವಹಿವಾಟಿಗೆ ತೊಂದರೆ ಮಾಡಬಾರದು ಎಂದು ದಾವೆ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ವಾದಿಗಳು ಪ್ರತಿವಾದಿಯ ಜಾಗಕ್ಕೆ ದಾವೆ ದಾಖಲಿಸಿರುತ್ತಾರೆ ಆದರೆ ವಾದಿಗಳ ಜಾಗವು ಉತ್ತರ ದಿಕ್ಕಿನಲ್ಲಿರುತ್ತದೆ ಎಂದು ಉತ್ತರಿಸಿರುತ್ತಾರೆ.

3. ಈ ದಾವೆಯಲ್ಲಿರುವ ದಾವಾ ಆಸ್ತಿಯ ಸರ್ವೇ ನಂಬರ 427 ಆಗಿರುತ್ತದೆ. ಸದ್ರಿ ಸರ್ವೇ ನಂಬರನಲ್ಲಿ ಒಟ್ಟು 8 ಗುಂಟೆ ಜಮೀನು ಇರುತ್ತದೆ. ಅದರಲ್ಲಿ 4 ಗುಂಟೆ ವಾದಿಗಳಿಗೆ ಮತ್ತು 4 ಗುಂಟೆ ಪ್ರತಿವಾದಿಗಳಿಗೆ ಇರುತ್ತದೆ. ಸರ್ವೇ ನಂಬರ 427 ಕ್ಕೆ ಸಂಬಂಧಿಸಿದಂತೆ ನಾನು ದಾಖಲೆ ನೋಡಿರುವುದಿಲ್ಲ. ಈ ಮೇಲೆ ಹೇಳಿದಂತೆ ಯಾವ ಆಧಾರದಲ್ಲಿ ಸರ್ವೇ ನಂಬರ 427 ರಲ್ಲಿ 4 ಗುಂಟೆ ವಾದಿಗಳಿಗೆ ಮತ್ತು 4 ಗುಂಟೆ ಪ್ರತಿವಾದಿಗಳಿಗೆ ಇರುತ್ತದೆ ಎಂದು ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ನಾವು ಸಾಗುವಳಿ ಮಾಡುವುದನ್ನು ನೋಡಿದ ಆಧಾರದಲ್ಲಿ ಹೇಳುತ್ತಿದ್ದೇನೆ ಎಂದು ಉತ್ತರಿಸಿರುತ್ತಾರೆ. ನಾನು ವಾದಿ ಮತ್ತು ಪ್ರತಿವಾದಿಗಳು ಸಾಗುವಳಿ ಮಾಡುತ್ತಿದ್ದ ಜಮೀನನ್ನು ಸರ್ವೇ ಮಾಡಿರುವುದಿಲ್ಲ.

4. ಸರ್ವೇ ನಂಬರ 427/1 ಈಗ ಎರಡು ಹಿಸ್ಸಾ ಆಗಿ ಸರ್ವೇ ನಂಬರ 427/1ಅ ಮತ್ತು ಸರ್ವೇ ನಂಬರ 427/1 ಬ ಎಂದು ಆಗಿರುತ್ತದೆ ಎಂದರೆ ಗೊತ್ತಿಲ್ಲ. ಸದ್ರಿ ಎರಡು ಹಿಸ್ಸಾಗಳಲ್ಲಿರುವ ವಾದಿ ಮತ್ತು ಪ್ರತಿವಾದಿಗಳ ಜಾಗದಲ್ಲಿ ಅವರವರು ಕಬ್ಜಾ ವಹಿವಾಟಿ ಇರುತ್ತಾರೆ ಎಂದರೆ ಸರಿ. ಸರ್ವೇ ನಂಬರ 427/1ಅ ರಲ್ಲಿ ಇರುವ ಜಾಗದಲ್ಲಿ 1 ನೇ ಪ್ರತಿವಾದಿ ಮತ್ತು ಅವರ ಮನೆಯವರು ಕಬ್ಜಾ ವಹಿವಾಟಿ ಹೊಂದಿರುತ್ತಾರೆ ಎಂದರೆ ಸರಿ. ಅದೇ ರೀತಿ ಸರ್ವೇ ನಂಬರ 427/1ಬ ರಲ್ಲಿರುವ ಜಾಗದಲ್ಲಿ ವಾದಿಗಳು ಕಬ್ಜಾ ವಹಿವಾಟಿಯಲ್ಲಿ ಇರುತ್ತಾರೆ ಎಂದರೆ ಸರಿ. ಸರ್ವೇ ನಂಬರ 427/1ಅ ಮತ್ತು ಸರ್ವೇ ನಂಬರ 427/1ಬ ರಲ್ಲಿರುವ ಆಸ್ತಿಯು ನನ್ನ ಮನೆಯಿಂದ ಒಂದು ಕಿಲೋಮೀಟರ್ ದೂರದಲ್ಲಿರುತ್ತದೆ. ನಾನು ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದರೆ ಸರಿ.

5. 1 ರಿಂದ 5 ನೇ ಪ್ರತಿವಾದಿಗಳು ಮತ್ತು ನಾನು ಒಂದೇ ಕುಟುಂಬಕ್ಕೆ ಸೇರಿದ್ದು ಒಂದು ತುಳಸಿ ಪೂಜೆ ಮಾಡುತ್ತೇವೆ ಎಂದರೆ ಸರಿಯಲ್ಲ. ನಾನು ವಾದಿ ಮತ್ತು ಪ್ರತಿವಾದಿಗಳನ್ನು ಒಂದೇ ಊರಿನಲ್ಲಿ ಇರುವುದರಿಂದ ಅವರನ್ನು ಪ್ರತಿನಿತ್ಯ ಭೇಟಿ ಮಾಡುತ್ತೇನೆ. 4 ನೇ ಪ್ರತಿವಾದಿ ಈ ದಾವೆಯಲ್ಲಿ ಸಾಕ್ಷಿ ಹೇಳಿರುವ ವಿಚಾರ ಗೊತ್ತು. ಸರ್ವೇ ನಂಬರ 427/1ಅ ರಲ್ಲಿರುವ ಜಾಗದ ಚಕ್ಕುಬಂದಿ ಹೇಳಬಹುದು. ಸದ್ರಿ ಸರ್ವೇ ನಂಬರನ ಉತ್ತರಕ್ಕೆ ಎರಡು ಮನೆ ಮತ್ತು ಒಂದು ದನದ ಕೊಟ್ಟಿಗೆ ಇರುತ್ತದೆ. ದಕ್ಷಿಣಕ್ಕೆ 7 ನೇ

ಪ್ರತಿವಾದಿಯವರ ಮನೆ ಇರುತ್ತದೆ. ಪೂರ್ವಕ್ಕೆ ರಸ್ತೆ ಇರುತ್ತದೆ ಹಾಗೂ ಪಶ್ಚಿಮಕ್ಕೆ ಗೋವಿಂದರವರು ಕೊಟ್ಟಿಗೆ ಇರುತ್ತದೆ. ಸರ್ವೇ ನಂಬರ 427/1ಬ ರಲ್ಲಿರುವ ಜಾಗದ ಚಕ್ಕುಬಂದಿ ಹೇಳಬಹುದು. ಸ್ದ್ರಿ ಸರ್ವೇ ನಂಬರನ ಉತ್ತರಕ್ಕೆ ರಸ್ತೆ ಇರುತ್ತದೆ. ದಕ್ಷಿಣಕ್ಕೆ 1 ನೇ ಪ್ರತಿವಾದಿಯವರ ಜಾಗ ಇರುತ್ತದೆ. ಪೂರ್ವಕ್ಕೆ ರಸ್ತೆ ಇರುತ್ತದೆ ಮತ್ತು ಪಶ್ಚಿಮಕ್ಕೆ ಗೋವಿಂದರವರ ಕೊಟ್ಟಿಗೆ ಇರುತ್ತದೆ. ನನಗೆ ದಾವಾ ಆಸ್ತಿಗಳ ಬಗ್ಗೆ ಚತುರ್ಗಡಿ ಗೊತ್ತಿಲ್ಲದೇ ಇದ್ದರೂ ಸಹ ಪ್ರತಿವಾದಿಗಳು ಹೇಳಿದಂತೆ ಸುಳ್ಳು ಚತುರ್ಗಡಿಗಳನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಮತ್ತು ನನ್ನ ನಡುವೆ ವೈಮನಸ್ಸು ಇರುವುದರಿಂದ ಈಗ ಈ ದಾವೆಯಲ್ಲಿ ಪ್ರತಿವಾದಿಗಳ ಪರ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಗಳಿಗೆ ಸೇರಿದ ದಾವಾ ಆಸ್ತಿಯಲ್ಲಿ ಕಟ್ಟಿಗೆ ಕೂಡಿ ಇಡುವುದು ಮತ್ತು ಬಟ್ಟೆ ಒಣಗಿಸುವುದು ಮಾಡಿ ಅವರ ವಹಿವಾಟಿಗೆ ತೊಂದರೆ ಕೊಡುತ್ತಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ವಿಚಾರಗಳನ್ನು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ವಿಚಾರಗಳನ್ನು ಪ್ರತಿವಾದಿಗಳು ಹೇಳಿ ಬರೆಸಿದ್ದು ಅದರಲ್ಲಿ ಯಾವುದೇ ಸತ್ಯಾಂಶ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ –ಇಲ್ಲ.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ.**

**ಸಹಿ ಇದೆ.**

**ಹೆಚ್ಚುವರಿ ಸಿವಿಲ್ ಜಡ್ಜ್, ಭಟ್ಕಳ.**